# <u>ಕಾರ್ಮಿಕ ನ್ಯಾಯಾಲಯ, ಮೈಸೂರು.</u>

## **Ref**: 8/2026

ಡಬ್ಲೂ.ಡಬ್ಲ್ಯೂ– 1

**ದಿನಾಂಕ 17.06.2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು**

**ಪಾಟೀ ಸವಾಲುಃ2 ನೇ ಪಕ್ಷಗಾರರ ಪರ ಶ್ರೀ. ಆರ್.ಸಿ ವಕೀಲರಿಂದಃ**

ನಾನು ಮೂಲತಃ chartered accountant ಬಳಿ ಕೆಲಸಕ್ಕೆ ಸೇರಿದ್ದೆ ಎಂದರೆ ಸರಿಯಲ್ಲ. ನನ್ನನ್ನು ಕೆಲಸಕ್ಕೆ ತೆಗೆದುಕೂಂಡಿದ್ದ chartered accountant ರವರ ಹೆಸರು ನನಗೆ ಗೊತ್ತಿಲ್ಲ. ನನಗೆ ಸಂಬಳವನ್ನು ಸದರಿ chartered accountant ರವರು ಕೊಡುತ್ತಿದ್ದರು ಎಂದರೆ ಸರಿಯಲ್ಲ. ನನಗೆ ಸಂಬಳವನ್ನು 2 ನೇ ಪಕ್ಷಗಾರರ ಸಂಸ್ಥೆಯವರು ಕೊಡುತ್ತಿದ್ದರು ಎನ್ನುವ ಬಗ್ಗೆ ನನ್ನ ಬಳಿ ಯಾವುದೇ ದಾಖಲೆ ಇಲ್ಲ. ನನಗೆ ಇ.ಎಸ್.ಐ ಹಾಗೂ ಪಿ.ಎಫ್ ನ್ನು chartered accountant ರವರು ಕೊಡುತ್ತಿದ್ದರು ಎಂದರೆ ಸರಿಯಲ್ಲ. ಇ.ಎಸ್.ಐ ಹಾಗೂ ಪಿ.ಎಫ್ ನ್ನು 2 ನೇ ಪಕ್ಷಗಾರರ ಸಂಸ್ಥೆಯವರು ಕೊಟ್ಟಿದ್ದರು ಎಂದು ತೋರಿಸುವ ಬಗ್ಗೆ ನನ್ನ ಬಳಿ ದಾಖಲೆ ಇಲ್ಲ.

ನಾನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುವ ದಾಖಲೆಗಳಲ್ಲಿ ಅಂದರೆ ನಿ.ಡಬ್ಲೂ– 1 ರಿಂದ 13 ರ ದಾಖಲೆಗಳಲ್ಲಿ ನನ್ನನ್ನು 2 ನೇ ಪಕ್ಷಗಾರರ ಸಂಸ್ಥೆಯವರು ನೇಮಕ ಮಾಡಿಕೊಂಡಿರುವ ಬಗ್ಗೆ ಯಾವುದೇ ದಾಖಲೆಗಳು ಇರುವುದಿಲ್ಲ ಎಂದರೆ ಸಾಕ್ಷಿ ನೇಮಕಾತಿ ಪತ್ರ ಕೊಟ್ಟಿಲ್ಲ ಎನ್ನುತ್ತಾರೆ. 2 ನೇ ಪಕ್ಷಗಾರರ ಸಂಸ್ಥೆಯವರು ನೇಮಕಾತಿ ಪತ್ರ ಕೊಡದೇ ಇರುವ ಕಾರಣ ನಾನು 2 ನೇ ಪಕ್ಷಗಾರರ ಸಂಸ್ಥೆಯ ಕಾರ್ಮಿಕನಾಗಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಹಾಗೂ 2 ನೇ ಪಕ್ಷಗಾರರ ಸಂಸ್ಥೆಯವರ ನಡುವೆ ಮಾಲೀಕ ಹಾಗೂ ಕಾರ್ಮಿಕ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಕಾರ್ಮಿಕನೇ ಅಲ್ಲ ಎಂದರೆ ಸರಿಯಲ್ಲ. ನನಗೆ chartered accountant ರವರು ತಿಳಿಸಿದ ಕೆಲಸವನ್ನು ನಾನು ಮಾಡುತ್ತಿದ್ದೆ ಎಂದರೆ ಸರಿಯಲ್ಲ. ನನ್ನನ್ನು chartered accountant ರವರು 2 ನೇ ಪಕ್ಷಗಾರರ ಸಂಸ್ಥೆಯಲ್ಲಿ ಕೆಲಸ ಮಾಡಲು ಬಾಡಿಗೆಗೆ ತೆಗೆದುಕೊಂಡಿದ್ದರು ಎಂದರೆ ಸರಿಯಲ್ಲ. chartered accountant ರವರು ತೆಗೆದುಕೊಂಡಿದ್ದ ಗುತ್ತಿಗೆಯ ಕೆಲಸವನ್ನು ಬೇಗ ಮುಗಿಸಿಕೊಡುವ ಸಲುವಾಗಿ ಅವರು ನನ್ನನ್ನು ಬಾಡಿಗೆಗೆ ಪಡೆದಿದ್ದರು ಎಂದರೆ ಸರಿಯಲ್ಲ. ನನಗೆ ಮಾರ್ಗದರ್ಶನ ಹಾಗೂ ಸಲಹೆ ಸೂಚನೆಗಳನ್ನು ಕೊಡುತ್ತಿದ್ದವರು

chartered accountant ರವರು ಎಂದರೆ ಸರಿಯಲ್ಲ. Chartered Accountant ರವರು ಸ್ವಂತತ್ರವಾದ ಏಜೆನ್ಸಿಯಾಗಿದ್ದು, ಅವರ ಅಡಿಯಲ್ಲಿ ನಾನು ಕೆಲಸ ಮಾಡುತ್ತಿದ್ದೆ ಎಂದರೆ ಸರಿಯಲ್ಲ.

2007ರ ನಂತರ 2 ನೇ ಪಕ್ಷಗಾರರ ಸಂಸ್ಥೆಯಲ್ಲಿ ಗಣಕಯಂತ್ರದ ಮುಖಾಂತರ ಕೆಲಸ ಪ್ರಾರಂಭವಾದ ಕಾರಣ ಗುತ್ತಿಗೆಯನ್ನು ಮುಕ್ತಾಯ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ನಾನು ಇದ್ದಾಗ ಮ್ಯಾನ್ಯುಯಲ್ ಕೆಲಸ ಕಡಿಮೆ ಆಗಿ, ಗಣಕಯಂತ್ರದ ಮೂಲಕ ಮಾಡುವ ಕೆಲಸ ಹೆಚ್ಚಾಗಿತ್ತು ಎಂದರೆ ಸರಿ. ಗಣಕಯಂತ್ರದ ಮೂಲಕ ಕೆಲಸ ಮಾಡಲು ಗಣಕಯಂತ್ರದಾರರ ಅವಶ್ಯಕತೆ ಇತ್ತು ಎಂದರೆ ಸರಿ. ಗಣಕಯಂತ್ರದಲ್ಲಿ ನನಗೆ ಕೌಶಲ್ಯತೆ ಇದ್ದ ಬಗ್ಗೆ ನಾನು ಯಾವುದೇ ದಾಖಲೆ ಕೊಟ್ಟಿಲ್ಲ. 2 ನೇ ಪಕ್ಷಗಾರ ಸಂಸ್ಥೆಯವರು Chartered Accountant ರವರ ಜೊತೆ ಇಂತಿಷ್ಟು ಅವಧಿಗೆ ಎಂದು ಗುತ್ತಿಗೆ ಕರಾರು ಮಾಡಿಕೊಂಡಿದ್ದರು, ಸದರಿ ಅವಧಿ ಮುಗಿದ ನಂತರ ನನ್ನ ಕೆಲಸ ಮುಕ್ತಾಯಗೊಂಡಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನನ್ನನ್ನು ಕೆಲಸದಿಂದ ವಜಾ ಮಾಡಿರುವುದರ ಸಂಬಂಧ 2 ನೇ ಪಕ್ಷಗಾರರ ಸಂಸ್ಥೆಯ ಯಾವುದೇ ಪಾತ್ರ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ನ್ಯಾಯಾಲಯದ ಮುಂದೆ ಹಾಜರು ಮಾಡಿರುವ ದಾಖಲಾತಿಗಳಿಗೂ ಹಾಗೂ 2 ನೇ ಪಕ್ಷಗಾರರ ಸಂಸ್ಥೆಯವರಿಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ಈ ಅರ್ಜಿಯಲ್ಲಿ ಕೋರಿರುವ ಪರಿಹಾರಗಳಿಗೂ 2 ನೇ ಪಕ್ಷಗಾರರ ಸಂಸ್ಥೆಯವರಿಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ವಿವಾದವನ್ನು ನ್ಯಾಯಾಲಯದ ಮುಂದೆ ತಂದಿರುತ್ತೇನೆ ಎಂದರೆ ಸರಿಯಲ್ಲ. ನಾನು ತುಂಬಾ ವಿಳಂಬ ಮಾಡಿ ವಿವಾದವನ್ನು ನ್ಯಾಯಾಲಯದ ಮುಂದೆ ತಂದಿರುವ ಕಾರಣ ಅದು ಕಾನೂನಿನಡಿಯಲ್ಲಿ ಊರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಿದೆ.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ, ತಿಳಿಸಿ, ಹೇಳಿದಾಗ, ಅವರು ಅದು ಸರಿ ಇದೆ ಎಂದು ಒಪ್ಪಿದ್ದಾರೆ.)

**ಅಧ್ಯಕ್ಷಾಧಿಕಾರಿಗಳು,**
**ಕಾರ್ಮಿಕ ನ್ಯಾಯಾಲಯ, ಮೈಸೂರು**